# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 246/2023**

| | | |
|---|---|---|
| **ಸಾಕ್ಷಿದಾರರ ಹೆಸರು** | : ಸಯದ್ ಸಾದಿಕ್ ಪಾಷ | **ಪಿಡಬ್ಲ್ಯೂ : 5** |
| **ತಂದೆಯ / ಗಂಡನ ಹೆಸರು** | : ಸಯದ್ ವಾಜಿದ್ ಅಲಿ | **ಸಿಡಬ್ಲ್ಯೂ : 9** |
| **ವಯಸ್ಸು** | : 53 ವರ್ಷ | |
| **ಉದ್ಯೋಗ** | : ಶಿಕ್ಷಕರು , ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ , ಕ್ಯಾತಮಾರನಹಳ್ಳಿ | |
| **ವಾಸಸ್ಥಳ** | : ಕ್ಯಾತಮಾರನಹಳ್ಳಿ | |

**ಸಾಕ್ಷಿಯನ್ನು ಈ ದಿನ ದಿಃ 12.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಶಿಕ್ಷಕನಾಗಿ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಅಜೀಜ್ ಶೇಟ್ ನಗರದಲ್ಲಿ 2019 ರಿಂದ 2024 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ದಾಖಲೆಗಳ ಮೇಲೆ ಸಹಿ ಮಾಡುತ್ತೇನೆ ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಮಾನತ್ತು ಮಹಜರ್ ಆಗಿದ್ದು, ಅದನ್ನು ನಿಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು.

3. ದಿ.15.12.2023 ರಂದು ನಾನು ಶಾಲೆಯಲ್ಲಿದ್ದಾಗ ಬಿಇಒ ಆಫೀಸ್ ನಿಂದ ಕರೆ ಬಂದಿದ್ದು , ಬಿಇಒ ರವರು ನನಗೆ ಮಂಡಿ ಪೊಲೀಸ್ ಠಾಣೆಗೆ ಹೋಗಲು ತಿಳಿಸಿದರು. ನಾನು ಮದ್ಯಾಹ್ನ 12.40 ರ ಸುಮಾರಿಗೆ ಮಂಡಿ ಪೊಲೀಸ್ ಠಾಣೆ ಗೆ ಹೋಗಿರುತ್ತೇನೆ. ನಾನು ಅಲ್ಲಿಗೆ ಹೋದಾಗ ಅಲ್ಲಿಗೆ ಮಧುಸೂಧನ್ ಎನ್ನುವವರು ಬಂದಿದ್ದು, ಅವರೂ ಕೂಡ ದೈಹಿಕ ಶಾಲಾ ಶಿಕ್ಷಕರಾಗಿದ್ದು, ಕೆಸರೆಯವರಾಗಿರುತ್ತಾರೆ. ನಾನು ಅಲ್ಲಿಗೆ ಹೋದಾಗ ತನಿಖಾಧಿಕಾರಿಯವರು, ಮೂರು ಜನ ಆರೋಪಿತರು ಇದ್ದರು. ತನಿಖಾಧಿಕಾರಿಯವರು ನಮಗೆ ಒಂದು ಕಡೆ ಹೋಗಿ ಮಹಜರ್ ಜರುಗಿಸುತ್ತೇವೆ. ಅದಕ್ಕೆ ನೀವು ಪಂಚರಾಗುವಂತೆ ಕೋರಿಕೊಂಡರು.

4. ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪೊಲೀಸ್ ನೋಟೀಸ್ ಆಗಿದ್ದು, ಅದನ್ನು ನಿಪಿ.8 ಎಂದು, ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ನಾವು ಮಹಜರ್ ಗೆ ಹಾಜರಾಗುವಂತೆ ನಮಗೆ ನೋಟೀಸ್ ನೀಡಲಾಗಿತ್ತು.

5. ನಂತರ ನಾನು , 3 ಜನ ಆರೋಪಿತರು , ಪೊಲೀಸ್ ಇನ್ಸ್ ಪೆಕ್ಟರ್ ರವರು ಮತ್ತು ಮಧುಸೂಧನ್ ರವರು ಇಲಾಖಾ ವಾಹನದಲ್ಲಿ ಮದ್ಯಾಹ್ನ 01.00 ಗಂಟೆಗೆ ಹೊರಟು, ಬನ್ನಿಮಂಟಪದ ಬಳಿ ರೈಲ್ವೆ ಶೆಡ್ ನ ಹತ್ತಿರ ಗುಮನಾಂಶಾವಲಿ ದರ್ಗಾದ ಹಿಂದುಗಡೆ ನಿರ್ಜನ ಪ್ರದೇಶಕ್ಕೆ ಹೋಗಿರುತ್ತೇವೆ. ಸದರಿ ಪ್ರದೇಶವನ್ನು ಆರೋಪಿತರು ತೋರಿಸಿರುತ್ತಾರೆ. ಸದರಿ ಪ್ರದೇಶದಲ್ಲಿಯ ಸ್ಥಳವನ್ನು ಆರೋಪಿತರು ತೋರಿಸಿದ್ದು, ಸ್ಥಳದಲ್ಲಿ ಪೊಲೀಸರು ಮಹಜರ್ ಜರುಗಿಸಿ, ಸ್ಥಳದಿಂದ ಒಂದು ಕಲ್ಲು ಸ್ಯಾಂಪಲ್ ಮಣ್ಣು, ರಕ್ತ ಮಿಶ್ರಿತ ಮಣ್ಣು ಮತ್ತು ಒಂದು ಹಗ್ಗವನ್ನು ಪೊಲಿಸರು ಅಮಾನತ್ತುಪಡಿಸಿಕೊಂಡರು. ಸದರಿ

ವಸ್ತುಗಳನ್ನು ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ಸೀಲ್ ಮಾಡಿ ಸಹಿ ಪಡೆಯಲಾಯಿತು. ಸ್ಥಳದಲ್ಲಿ ಫೋಟೋಗಳನ್ನು ಸಹ ತೆಗೆದಿರುತ್ತಾರೆ. ಆಗ ಮಹಜರ್ ನಲ್ಲಿ ಸಹಿ ಮಾಡಿರುತ್ತೇನೆ. ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಬಿಳಿ ಬಟ್ಟೆಯಲ್ಲಿ ಸುತ್ತಿ ಸುಸ್ಥಿತಿಯಲ್ಲಿದ್ದ ವಸ್ತುಗಳನ್ನು, ನ್ಯಾಯಾಲಯದ ಅನುಮತಿ ಮೇರೆಗೆ ತೆಗೆದು ನೋಡಲಾಗಿ ಅದರಲ್ಲಿ ರಕ್ತ ಮಿಶ್ರಿತ ಮಣ್ಣು ಇದ್ದು , ಎಂಒ–1 ಎಂದು , ರಕ್ತ ರಹಿತ ಮಣ್ಣು ಇದ್ದು , ಅದನ್ನು ಎಂಒ–2 ಎಂದು , ಒಂದು ಕಲ್ಲು ಇದ್ದು , ಅದನ್ನು ಎಂಒ–3 ಎಂದು , ಒಂದು ಪ್ಲಾಸ್ಟಿಕ್ ಹಗ್ಗದ ತುಂಡು ಇದ್ದು, ಅದನ್ನು ಎಂಒ–4 ಎಂದು ಗುರುತಿಸಲಾಯಿತು. ಸದರಿ ವಸ್ತುಗಳ ಮೇಲೆ ಅಂಟಿಸಿರುವ ಚೀಟಿಗಳ ಮೇಲೆ ನನ್ನ ಸಹಿ ಇರುತ್ತದೆ. ಮಹಜರ್ ಕಾಲದಲ್ಲಿ ತೆಗೆದ ಪೊಟೊಗಳನ್ನು ನೋಡಿದರೆ ಗುರುತಿಸಬಲ್ಲೆ . ಸಾಕ್ಷಿಯೂ 4 ಪೊಟೊಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ.9 ಎಂದು ಗುರುತಿಸಲಾಯಿತು. ಫೋಟೋದಲ್ಲಿ ನಾನು , ಮಧುಸೂಧನ್ ಮತ್ತು ಇಬ್ಬರೂ ಆರೋಪಿತರು ಇರುತ್ತೇವೆ. ಸಾಕ್ಷಿಯೂ ನ್ಯಾಯಲಯದ ಮುಂದೆ ಹಾಜರು ಇರುವ ಆರೋಪಿ 1 ಮತ್ತು 2 ರವರನ್ನು ನೋಡಿ ಗುರುತಿಸಿರುತ್ತಾರೆ.

6. ಮಹಜರ್ ಮುಗಿಸಿದ ನಂತರ ಠಾಣೆಗೆ ಹೋಗಿ ಅಲ್ಲಿಂದ ಶಾಲೆಗೆ ಹೋಗಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

7. ನಾನು ಸರ್ಕಾರಿ ಉರ್ದು ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದು, ಯಾವ ತರಗತಿಯವರಿಗೆ ಪಾಠ ಮಾಡುತ್ತೀರಿ ಎಂದರೆ ಸಾಕ್ಷಿಯೂ 1 ರಿಂದ 7 ನೇ ತರಗತಿಯ

ವಿದ್ಯಾರ್ಥಿಗಳಿಗೆ ಕನ್ನಡ ಪಾಠ ಮಾಡುತ್ತೇನೆ ಎಂದು ನುಡಿಯುತ್ತಾರೆ. ದಿ.15.12.2023 ರಂದು ನಿಮಗೆ ಯಾರು ಮಹಜರ್ ಗೆ ಬರುವಂತೆ ಹೇಳಿದರು ಎಂದರೆ ಸಾಕ್ಷಿಯೂ ಬಿಇಒ ಕಚೇರಿಯಿಂದ ಫೋನ್ ಕರೆ ಬಂದಿದ್ದು , ಆಗ ಹೆಡ್ ಮಾಸ್ಟರ್ ರವರು ನನಗೆ ಕರೆ ಬಂದಿರುವುದಾಗಿ ನಾನು ತರಗತಿಯಲ್ಲಿ ಪಾಠ ಮಾಡುವಾಗ ತಿಳಿಸಿರುತ್ತಾರೆ. ನಾನು ನಂತರ ನಾನು ಫೋನ್ ನಲ್ಲಿ ಬಿಇಒ ರವರ ಜೊತೆ ಮಾತನಾಡಿದ್ದು, ಅವರ ಜೊತೆ ಮಾತನಾಡಿದ್ದು , ಅವರು ನನಗೆ ಠಾಣೆಗೆ ಹೋಗುವಂತೆ ತಿಳಿಸಿರುತ್ತಾರೆ.

8. ಬಿಇಒ ರವರು ಠಾಣೆಗೆ ಹೋಗುವಂತೆ ತಿಳಿಸಿದಾಗ ಸಮಯ 12.20 ಆಗಿತ್ತು. ನಂತರ ನಾನು ಪಾಠ ಮಾಡುತ್ತಿದ್ದ ತರಗತಿಯಲ್ಲಿ ಪಾಠ ಮುಗಿಸಿ 12.30 ಕ್ಕೆ ಶಾಲೆಯಿಂದ ಹೊರಟಿರುತ್ತೇನೆ. ನಮ್ಮ ಶಾಲೆಯಿಂದ ಮಂಡಿ ಪೊಲೀಸ್ ಠಾಣೆ ಸುಮಾರು ಒಂದೂವರೆಯಿಂದ 2 ಕಿ.ಮೀ ಅಂತರದಲ್ಲಿರುತ್ತದೆ. ನಾನು ಠಾಣೆಗೆ ವಾಹನದಲ್ಲಿ ಹೋಗಿರುತ್ತೇನೆ. ನಾನು ಹೋಗುವ ಮುಂಚೆಯೇ ಮದುಸುದನ್ ರವರು ಠಾಣೆಗೆ ಬಂದಿರುತ್ತಾರೆ. ಠಾಣೆಗೆ ಹೋದಾಗ ಮಹಜರ್ ಗೆ ಬರುವಂತೆ ಯಾರು ತಿಳಿಸಿರುತ್ತಾರೆ ಎಂದರೆ ಅಲ್ಲಿ ಇನ್ಸ್ ಪೆಕ್ಟರ್ ರವರು ಒಂದು ಕಡೆ ಮಹಜರ್ ಒಂದು ಸ್ಥಳಕ್ಕೆ ಹೋಗುವುದು ಇದೆ ಎಂದು ತಿಳಿಸಿರುತ್ತಾರೆ. ಅವರು ನಮಗೆ ತಮ್ಮ ಜೊತೆ ಕರೆದುಕೊಂಡು ಹೋಗುತ್ತೇವೆ , ಬರಬೇಕೆಂದು ಹೇಳಿದರು ಎಂದರೆ ಸರಿ.

9. ಮಹಜರ್ ನಲ್ಲಿ ಏನು ಬರೆದಿದೆ ಎಂದು ತಿಳಿದಿರುತ್ತದೆಯೇ ಎಂದರೆ ಸಾಕ್ಷಿಯೂ ನನ್ನ ಮುಂದೆ ಬರೆದಿರುತ್ತಾರೆ ಎಂದು ತಿಳಿಸಿರುತ್ತಾರೆ. ಮಹಜರ್ ನಲ್ಲಿ ಜೀಪ್ ನಂಬರ್ ಏನು ಬರೆದಿರುತ್ತಾರೆ ಎಂದರೆ ಸಾಕ್ಷಿಯೂ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಜೀಪ್ ನಂಬರ್ ಬರೆದಿದೆಯೋ ಇಲ್ಲವೂ ನನಗೆ ಹೇಳಲು ಬರುವುದಿಲ್ಲ ಎಂದು

ನುಡಿಯುತ್ತಾರೆ. ಜೀಪ್ ನಲ್ಲಿ ನಾವು 7 ಜನ ಹೋಗಿರುತ್ತೇವೆ. ಠಾಣೆಯಿಂದ ಹೊರಟಾಗ 12.50 ನಿಮಿಷವಾಗಿತ್ತು. ಯಾವ ಮಾರ್ಗದಲ್ಲಿ ಸ್ಥಳಕ್ಕೆ ಹೋಗಿರುತ್ತೀರಿ ಎಂದರೆ ಸಾಕ್ಷಿಯೂ ಬನ್ನಿಮಂಟಪ ಮಾರ್ಗವಾಗಿ ರೈಲ್ವೆ ಶೆಡ್ ಬಳಿಯಿಂದ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನಾವು ಸ್ಥಳಕ್ಕೆ ಹೋದಾಗ 01.00 ಗಂಟೆಗೆ ಹೋಗಿರುತ್ತೇವೆ.

**10.** ಸ್ಥಳಕ್ಕೆ ಪೊಲಿಸರ ಜೊತೆ ಹೋಗಿ ಅಲ್ಲಿ, ಪೋಲಿಸರು ಹೇಳಿದ ಸ್ಥಳದಲ್ಲಿ ಇಳಿದುಕೊಂಡಿರುತ್ತೇನೆ ಎಂದರೆ ಸರಿ. ನಂತರ ಸ್ಥಳಕ್ಕೆ ಪೊಲಿಸರು ಕರೆದುಕೊಂಡು ಹೋಗಿದ್ದು ಎಲ್ಲರು ಒಟ್ಟಿಗೆ ಹೋಗಿರುತ್ತೀರಿ ಎಂದರೆ ಸರಿ.

**11.** ಸ್ಥಳದ ಚೆಕ್ಕುಬಂಧಿ ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿಯೂ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸಹಿ ಮಾಡಿದ ದಾಖಲೆಯಲ್ಲಿ ಚೆಕ್ಕು ಬಂಧಿಯನ್ನು ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ವಸ್ತುಗಳನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಮಹಜರ್ ನಲ್ಲಿ ಬರೆಯಲಾಗಿರುತ್ತಯೇ ಎಂದರೆ ಸಾಕ್ಷಿಯೂ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಾನು 15.12.2023 ರಂದು ಬಿ ಇ ಒ ರವರು ನನಗೆ ಠಾಣೆಗ ಹೊಗುವಂತೆ ತಿಳಿಸಿರುವುದಿಲ್ಲ ಅದೇ ರೀತಿ ನಾನು ಠಾಣೆಗೆ ಹೋಗಿರುವುದಿಲ್ಲ . ಅಲಿಂದ ಸ್ಥಳಕ್ಕೂ ಕೂಡ ಹೋಗಿರುವುದಿಲ್ಲ. ಸ್ಥಳದಲ್ಲಿ ಆ ದಿನ ಯಾವುದೇ ಮಹಜರ್ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ನ್ನು ಬರೆದು ದಿನಾಂಕದಂದು ಸ್ಥಳಕ್ಕೆ ಹೋಗಿರುವುದಿಲ್ಲ. ಅಲ್ಲಿ ನನ್ನ ಸಮಕ್ಷಮ ಯಾವುದೇ ಮಹಜರ್ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪೋಟೊಗಳನ್ನು ಬೇರೆ ದಿನ ನಿಲ್ಲಿಸಿ ಪೋಟೋಗಳನ್ನು ತೆಗೆದ್ದು , ಅವುಗಳನು ಕೇಸಿಗೆ ಅನುಕುಲವಾಗುವ ರೀತಿಯಲ್ಲಿ

ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಮುದ್ದೆಮಾಲು 3 ರಂತಹ ಕಲ್ಲುಗಳು ಎಲ್ಲ ಕಡೆ ಸಿಗುತ್ತವೆ, ಇದೇ ಕಲ್ಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಖಚಿತವಾಗಿ ಹೇಳಲು ಯಾವುದೆ ವಿಶೇಷ ಗುರುತು ಇರುವುದಿಲ್ಲ ಎಂದರೆ ಸಾಕ್ಷಿಯೂ ಅದೇ ಕಲ್ಲನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಆ ದಿನ ಆರೋಪಿತರನ್ನು ಪೊಲೀಸ್ ಠಾಣೆ ಯಲ್ಲಿ ನೋಡಿರುವುದಿಲ್ಲ . ಅವರು ನಮ್ಮ ಜೊತೆ ಸ್ಥಳಕ್ಕೂ ಬಂದಿರುವುದಿಲ್ಲ ಮತ್ತು ಸ್ಥಳವನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರಿ ಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಯಾವ ದಿನಾಂಕದಂದು ಹೋಗಿರುತ್ತೀರಿ ಎಂದರೆ ಸಾಕ್ಷಿಯೂ ದಿ.15.12.2022 ಎಂದು ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಶಿಕ್ಷಕನಾಗಿರುವುದರಿಂದ ಸಮಯ, ದಿನಾಂಕ, ವರ್ಷಗಳು ಸರಿಯಾಗಿ ನೆನಪಿರುತ್ತವೆ ಎಂದರೆ ಸರಿ. ನಾನು ಹೇಳಿದ ದಿನಾಂಕದಂದು ಯಾವುದೇ ಮಹಜರ್ ಜರುಗಿಸಿರುವುದಿಲ್ಲ, ಆ ಕಾರಣಕ್ಕೆ ಸರಿಯಾದ ವರ್ಷವನ್ನು ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**